ಜೆಎಸ್‌ಎಸ್ ಮಹಿಳಾ ಕಾಲೇಜು, ಕೊಳ್ಳೇಗಾಲ

ದಿನಾಂಕ : 10-08-2018

# ವರದಿ

## ಜೆಎಸ್‌ಎಸ್ ಮಹಿಳಾ ಕಾಲೇಜಿನಲ್ಲಿ ರಾ.ಸೇ.ಯೋ ಚಟುವಟಿಕೆಗಳ ಉದ್ಘಾಟನೆಯಲ್ಲಿ ಶ್ರೀ ಎಸ್ ದಿಲೀಪ್

## ಎನ್‌ಎಸ್‌ಎಸ್‌ನಿಂದ ಪರಿಪೂರ್ಣ ವ್ಯಕ್ತಿತ್ವ ನಿರ್ಮಾಣ ಸಾಧ್ಯ

ಕೊಳ್ಳೇಗಾಲ : ಆಗಸ್ಟ್ 10 : ಯಾವುದೇ ರಾಷ್ಟ್ರ ಸದೃಢಗೊಳ್ಳುವಲ್ಲಿ ಅಲ್ಲಿಯ ಶಿಕ್ಷಣದ ವ್ಯವಸ್ಥೆ ಮಹತ್ತರ ಪಾತ್ರ ವಹಿಸುತ್ತದೆ. ಅದೇ ರೀತಿ ಶಿಕ್ಷಣಕ್ಕೆ ಪೂರಕವಾಗಿ ದೇಶಕಟ್ಟುವ, ದೇಶಭಕ್ತಿ ಮೆರೆವ ರಾ.ಸೇ.ಯೋಗೆ ಪರಿಪೂರ್ಣ ವಿದ್ಯಾರ್ಥಿಗಳನ್ನು ಸೃಷ್ಟಿಸುವ ಶಕ್ತಿಯಿದೆ ಎಂದು ಶ್ರೀ ಎಸ್ ದಿಲೀಪ್, ಸಹಾಯಕ ಪ್ರಾಧ್ಯಾಪಕರು, ನಿಸರ್ಗ ಕಾಲೇಜ್ ಆಫ್ ಮಾನೇಜ್‌ಮೆಂಟ್, ಕೊಳ್ಳೇಗಾಲರವರು ಅಭಿಪ್ರಾಯಿಸಿದರು.

ಇಲ್ಲಿಯ ಜೆಎಸ್‌ಎಸ್ ಮಹಿಳಾ ಕಾಲೇಜಿನಲ್ಲಿ 2018-19ನೇ ಸಾಲಿನ ರಾ.ಸೇ.ಯೋ ಚಟುವಟಿಕೆಗಳನ್ನು ಉದ್ಘಾಟಿಸಿ ಮಾತನಾಡಿದರು.

ಗುಣಾತ್ಮಕ ಹಾಗೂ ಕ್ರಿಯಾತ್ಮಕ ಕಾರ್ಯಕ್ರಮಗಳನ್ನು ನೀಡುವ, ಪರಿಸರ ಕಾಳಜಿ ಮೂಡಿಸುವ, ವ್ಯಕ್ತಿತ್ವ ವಿಕಸನಕ್ಕೆ ಮೆಟ್ಟಿಲಾಗಿರುವ ರಾ.ಸೇ.ಯೋ ಪ್ರತಿಯೊಬ್ಬ ವಿದ್ಯಾರ್ಥಿಯಲ್ಲಿ ಸಮಾಜಮುಖಿ ಕಾರ್ಯಕ್ರಮ ಸೇರಿದಂತೆ ಎಲ್ಲವನ್ನು ಕಲಿಸಲಿದೆ. ಮಾನವೀಯ ಮೌಲ್ಯಗಳನ್ನು ಬೆಳೆಸಲಿದೆ ಎಂದರು.

ಅಧ್ಯಕ್ಷತೆ ವಹಿಸಿ ಮಾತನಾಡಿದ ಪ್ರಾಚಾರ್ಯ ಪ್ರೊ. ಉಮೇಶ 1969ರಲ್ಲಿ ಗಾಂಧೀಜಿ ಹುಟ್ಟು ಹಾಕಿದ ರಾ.ಸೇ.ಯೋ ಎಂದರೆ ಒಂದು ರಾಷ್ಟ್ರೀಯ ಚಳುವಳಿ. ಪ್ರಾರಂಭದಲ್ಲಿ 37 ವಿಶ್ವವಿದ್ಯಾನಿಲಯಗಳಲ್ಲಿದ್ದು ಇದು ಇಂದು ರಾಷ್ಟ್ರದ 750 ವಿಶ್ವವಿದ್ಯಾನಿಲಯಗಳಲ್ಲಿದೆ. ರಾಷ್ಟ್ರದ 50 ಲಕ್ಷಗಳ ಪೈಕಿ ರಾಜ್ಯದಲ್ಲಿ 05 ಲಕ್ಷಕ್ಕೂ ಮೀಗಿಲಾಗಿ ಸ್ವಯಂ ಸೇವಕರಿರುವುದು ಹೆಮ್ಮೆಯ ಸಂಗತಿ ಶಿಕ್ಷಣಕ್ಕೆ ಉತ್ತಮ ತಳಪಾಯ ಈ ರಾ.ಸೇ.ಯೋ. ವಿದ್ಯಾರ್ಥಿಗಳನ್ನು ಪರಿಪೂರ್ಣರನ್ನಾಗಿಸುವಲ್ಲಿ. ರಾ.ಸೇ.ಯೋ, ಪ್ರಮುಖ ಪಾತ್ರ ವಹಿಸುತ್ತಿದೆ. ವಿದ್ಯಾರ್ಥಿಗಳನ್ನು ಉತ್ತಮ ನಾಗರೀಕರನ್ನಾಗಿ ರೂಪಿಸುವಲ್ಲಿ, ಉತ್ತಮ ಹಾಗೂ ಪರಿಪೂರ್ಣ ಶಿಕ್ಷಣ ನೀಡವಲ್ಲಿ ಈ ಯೋಜನೆ ಸಹಕಾರಿ ಎಂದು ತಿಳಿಸಿದರು.

ವೇದಿಕೆಯಲ್ಲಿ ರಾ.ಸೇ.ಯೋ. ಘಟಕದ ಸಂಚಾಲಕರಾದ ಪ್ರೊ. ಎಂ. ಬಸವರಾಜು, ಆಂಗ್ಲ ಭಾಷಾ ವಿಭಾಗದ ಮುಖ್ಯಸ್ಥರಾದ ಶ್ರೀ ಎ ಪಿ ಮಹದೇವಪ್ಪರವರು ಉಪಸ್ಥಿತರಿದ್ದರು.

ಕು. ಶಿಲ್ಪಾ ಸ್ವಾಗತಿಸಿದರು, ಕು. ರಂಜಿತ ರವರು ವಂದಿಸಿದರು.

2018–19ನೇ ಸಾಲಿನ ರಾ.ಸೇ.ಯೋಯ ಚಟುವಟಿಕೆಗಳನ್ನು ಶ್ರೀ ಎಸ್ ದಿಲೀಪ್ ರವರು ಉದ್ಘಾಟಿಸುತ್ತಿರುವುದು. ಚಿತ್ರದಲ್ಲಿ ಶ್ರೀ ಎ ಪಿ ಮಹಾದೇವಪ್ಪ ಪ್ರಾಚಾರ್ಯ ಪ್ರೊ. ಉಮೇಶ, ಶ್ರೀ ಎಂ ಬಸವರಾಜು ಹಾಗೂ ಶ್ರೀಮತಿ ಕೆ ಆರ್ ಉಮಾದೇವಿರವರನ್ನು ಕಾಣಬಹುದು.



2018–19ನೇ ಸಾಲಿನ ರಾ.ಸೇ.ಯೋ ಚಟುವಟಿಕೆಗಳ ಉದ್ಘಾಟನಾ ಸಮಾರಂಭದಲ್ಲಿ ಶ್ರೀ ಎಸ್ ದಿಲೀಪ್‌ರವರು ಮಾತನಾಡುತ್ತಿರುವುದು.

ಚಿತ್ರದಲ್ಲಿ ಶ್ರೀ ಎ ಪಿ ಮಹಾದೇವಪ್ಪ ಪ್ರೊ. ಉಮೇಶ ಹಾಗೂ ಶ್ರೀ ಎಂ ಬಸವರಾಜುರವರನ್ನು ಕಾಣಬಹುದು.




ಎನ್‌ಎಸ್‌ಎಸ್ ಸ್ವಯಂ ಸೇವಕಿಯರಿಂದ ಪ್ರತಿಜ್ಞಾ ವಿಧಿ ಸ್ವೀಕಾರ

